(SRI T. MARIAPPA.)

enquiring about certain officers and whether we will be able to relieve such and such officers. It is a joint cadre and we have agreed for a certain deputation quota. Within that quota, we must send them. Within that quota, they must requisition the services.

ಶ್ರೀ ಜಿ. ಎಕ್. ಪುಟ್ಟಣ್ಣ (ತುಮಕೂರು).—ಮಾನ್ಯ ಸಚಿವರು ಹೇಳಿದರು, ಐ.ಎ.ಎಸ್. ಆಫೀಸರುಗಳನ್ನು ಕಳಿಸಿಕೊಡುವುದರಲ್ಲಿ ಕೇಂದ್ರ ಸರ್ಕಾರದಿಂದ ಮೈಸೂರು ಸರ್ಕಾರಕ್ಕೂ, ಮೈಸೂರು ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೂ ಕಾಗದ ಪತ್ರಗಳು ನಡೆಯುತ್ತಿರುತ್ತವೆ ಎಂದು. ಹೀಗೆ ಪತ್ರವ್ಯವಹಾರ ನಡೆಸುವ ಮುನ್ನ ಇಲ್ಲಿರತಕ್ಕ ಸಂಬಂಧಪಟ್ಟ I.A.S. ಆಫೀಸರನ್ನು ಕರೆಸಿ ಕೇಂದ್ರ ಸರ್ಕಾರಕ್ಕೆ ಹೋಗುವುದಕ್ಕೆ ಇಷ್ಟ ವಿದೆಯೋ ಇಲ್ಲವೋ ಎಂದು ಕೇಳುವ ಪದ್ಧತಿ ಯಿದೆಯೇ?

ಶ್ರೀ ಟಿ. ಮರಿಯಪ್ಪ.—I.A.Sಗೆ ಸೇರುವುದಕ್ಕೆ ಒಪ್ಪಿಕೊಂಡುಬಿಟ್ಟಮೇಲೆ, ನಾವು ಒಪ್ಪಿಗೆ ಕೊಟ್ಟರೆ ಅವರು ಸೆಂಟ್ರಲ್ ಗೌರ್ನಮೆಂಟಿಗೆ ಹೋಗಿ serve ಮಾಡಲೇಬೇಕು. ಸಾಮಾನ್ಯವಾಗಿ I.A.S. ಸೇರಿದರೆ ಹೀಗೆ ಅನುಕೂಲ ಮತ್ತು ಅನಾನುಕೂಲವಿರುತ್ತದೆ. ಹೀಗೆಯೇ ಎಂದು ಹೇಳುವುದಕ್ಕಾಗುವುದಿಲ್ಲ. ಆಫೀಸರುಗಳನ್ನು ಕಳಿಸಿಕೊಡುವುದು ಬಿಡುವುದು State Governmentನ discretionಗೆ ಮಾತ್ರ ಒಳಪಟ್ಟಿದಾಗಿದೆ. ಸಂಬಂಧಪಟ್ಟ ಆಫೀಸರಿಗೆ ಆ ಬಗ್ಗೆ discretion ಇಲ್ಲ.

ಶ್ರೀ ಜಿ. ಎಕ್. ಪುಟ್ಟಣ್ಣ.—ಸಂಬಂಧಪಟ್ಟ ಆಫೀಸರಿಗೆ intimation ಕೊಟ್ಟು ಅವರಿಗೆ ಇಷ್ಟವಿದೆಯೇ ಇಲ್ಲವೇ ಎಂದು ಕೇಳಿ ಮಾಡುತ್ತೀರೋ ಅಥವಾ ನಿಮ್ಮಿಷ್ಟ ಬಂದಂತೆ select ಮಾಡಿ ಕಳುಹಿಸುತ್ತೀರೋ?

ಶ್ರೀ ಟಿ. ಮರಿಯಪ್ಪ.—ಕಾನೂನು ರೀತ್ಯಾ ಹಾಗೆ ಆಫೀಸರನ್ನು ಕೇಳಬೇಕಾದ ಆಗತ್ಯವಿಲ್ಲವೇ ಇಲ್ಲ.

ಶ್ರೀ ಜಿ. ಎಕ್. ಪುಟ್ಟಣ್ಣ.—ಹಾಗಾದರೆ ತಮ್ಮ ಇಷ್ಟಾನುಸಾರ ಮಾಡಬೇಕೆಂದಿದೆಯೇ?

ಶ್ರೀ ಟಿ. ಮರಿಯಪ್ಪ.—I.A.S. ಸರ್ವಿಸ್ಸಿಗೆ ಸೇರಿದ ಮೇಲೆ, ಅವರನ್ನು ಬಿಟ್ಟುಕೊಡುವ authority ಮತ್ತು discretion ಇರುವುದು ಸರ್ಕಾರಕ್ಕೆ ಮಾತ್ರ. The Officer has no discretion in the matter.

Sri M. RAJASEKHARA MURTHY.—May I know in how many cases requests from the Central Government to share the services of I.A.S. Officers has been turned down by the Government of Mysore?

Sri T. MARIAPPA.—It is not a question of turning down a request at all. It is a question of fixing up a person after mutual consultation.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಈಗ ಮಂತ್ರಿಗಳು ಹೇಳಿದರು, ಕೇಂದ್ರ ಸರ್ಕಾರಕ್ಕೂ ನಮಗೂ ಪರಸ್ಪರ consultation ನಡೆಯುತ್ತಿರುತ್ತದೆ, ಎಷ್ಟೋವೇಳೆ ನಾವು ಕೊಟ್ಟವರನ್ನು ಅವರು ಒಪ್ಪದಿರುತ್ತಾರೆ, ಅವರಿಗೆ ಬೇಕಾದವರನ್ನು ನಾವು ಕೊಡುವುದಕ್ಕಾಗದಿರುವ ಸಂದರ್ಭವಿರುತ್ತದೆ ಎಂದು ಆ ಪ್ರಕಾರ ಕೇಂದ್ರ ಸರ್ಕಾರದವರು ನೀವು ಕಳಿಸಿರತಕ್ಕ ಪಟ್ಟಿಯನ್ನು ಒಪ್ಪದಿರುವುದಕ್ಕೆ ಇರಬಹುದಾದ ಕಾರಣಗಳೇನೇನು ಎಂದು ಹೇಳುತ್ತೀರಾ?

Sri T. MARIAPPA.—He must direct the question to proper quarters.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಮ್ಮ ಸರ್ಕಾರದವರು ಕಳುಹಿಸಿದ ಲಿಸ್ಟಿನಲ್ಲಿ ಅವರು ಯಾರನ್ನೋ ಬೇಡವೆಂದು ಹೇಳಿದರಲ್ಲಾ ಆ ಸಂದರ್ಭದಲ್ಲಿ ಅವರು ಕೊಟ್ಟಿರುವ ಕಾರಣವೇನು?

ಶ್ರೀ ಟಿ. ಮರಿಯಪ್ಪ.—ಹೀಗೆಯೇ ಎಂದು ಹೇಳುವುದಕ್ಕಾಗುವುದಿಲ್ಲ. Mutual consultation ಮಾಡುವಾಗ ಅವರು ಮೂರು ಜನರನ್ನು ಹೇಳುವುದು, ನಾವು ಅವರಾಗುವುದಿಲ್ಲ, ಇನ್ನು ಬೇರೆ ಜನರನ್ನು ತೆಗೆದು ಕೊಳ್ಳಿ ಎನ್ನುವುದು, ಹೀಗೆ ನಡೆಯುತ್ತಿರುತ್ತದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಇದುವರೆಗೂ turn down ಮಾಡಿರುವ ಸಂದರ್ಭಗಳಲ್ಲಿ ಏನೇನು ಕಾರಣಗಳನ್ನು ಕೊಟ್ಟಿದ್ದಾರೆಂಬುದನ್ನು ಹೇಳುತ್ತೀರಾ?

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಭಾರತ ಸರ್ಕಾರದವರು ಪ್ರತ್ಯೇಕವಾಗಿ ಇಂತಹ ಅಧಿಕಾರಿಯನ್ನೇ ಕಳಿಸಿ ಎಂದು ಏನಾದರೂ ನೂಚನೆ ಕೊಡುತ್ತಾರೆಯೇ?

ಶ್ರೀ ಟಿ. ಮರಿಯಪ್ಪ.—ಅದು ಹೋಂ ಮಿನಿಸ್ಟರ ಪುಲ್ ಚಾರ್ಜ್‌ನಲ್ಲಿರುತ್ತದೆ. ಅವರು ಸಾಮಾನ್ಯವಾಗಿ ಏಳು ಎಂಟು ಹೆಸರುಗಳನ್ನುಳ್ಳ ಒಂದು ಲಿಸ್ಟನ್ನು ತಯಾರುಮಾಡಿ ಕಳಿಸುತ್ತಾರೆ. ಕೇಂದ್ರ ಸರ್ಕಾರದ ಒಪ್ಪಿಗೆಯಪ್ರಕಾರ ಎಫಿಷಿಯೆಂಟಾಗಿರುವ ವರನ್ನು ಮಾತ್ರ ಅಲ್ಲಿಗೆ ಕಳಿಸುತ್ತೇವೆ.

Sri K. PUTTASWAMY.—Are there any periodical meetings between the Home Ministry and the representatives of the State Government to decide the question of deputation of officials expeditiously?

Sri T. MARIAPPA.—Sir, there is no need for such a conference; it is all settled by correspondence.

Verification of Dates of Birth of Officers and Officials.

Q.—312. Sri G. SIVAPPA (Chitaldrug).—

Will the Government be pleased to state:—

(*a*) whether they are aware that discrimination has been made in regard to the verification of the dates of birth of officers and officials of the State Government?

(*b*) whether it is not a fact that this rule is not applied to those coming from the integrated areas?

A.—**Sri T. MARIAPPA** (Minister for Finance) [on behalf of SRI S. NIJALINGAPPA (Chief Minister)].—

(*a*) No.

(*b*) The Government servants allocated to the new Mysore State being governed by the respective rules of the Governments by which they were governed prior to 1-11-1956, pending promulgation of common rules.

Sri G. SIVAPPA.—May I know when once the dates of births are settled, whether the Government is entitled to reopen the question ?

Sri T. MARIAPPA.—Settled cases would not be reopened unless there is abundant evidence to the contrary.

ಶ್ರೀ ಜಿ. ಶಿವಪ್ಪ.—ಯಾವ ಯಾವ ಎವಿಡೆನ್ಸ್‌ಮೇಲೆ ನೌಕರರ ಜನ್ಮ ದಿನಾಂಕಗಳನ್ನು ತಾಳೆ ನೋಡುತ್ತೀರಿ ?

ಶ್ರೀ ಟಿ. ಮರಿಯಪ್ಪ.—ನೌಕರನು ಹುಟ್ಟಿದ ತಾರೀಖನ್ನು ತಾಳೆ ನೋಡಬೇಕಾದರೆ, ಅವನು ಹುಟ್ಟಿದ ವರ್ಷದ ಜಾತಕ, ಸ್ಕೂಲುಗಳಲ್ಲಿ ಹೊಸದಾಗಿ ಸೇರುವಾಗ ವಯಸ್ಸು ಎಂಟ್ರಿ ಆಗಿರುವುದು, ಇನ್‌ಷ್ಯೂರೆನ್ಸ್ ಬಾಂಡ್ಸ್, ಸರ್ಟಿಫಿಕೇಟುಗಳು—ಇತ್ಯಾದಿಗಳು ಅವಶ್ಯಕವಾಗಿವೆ.

ಶ್ರೀ ಜಿ. ದುಗ್ಗಪ್ಪ.—ಕೆಲವು ಗೆಜೆಟೆಡ್ ಆಫೀಸರುಗಳು ಒಂದುಸಾರಿ ತಮ್ಮ ಹುಟ್ಟಿದ ತಾರೀಖನ್ನು ಸರ್ವಿಸ್ಸಿಗೆ ಸೇರುವಾಗ ಕೊಟ್ಟಮೇಲೆ ಎಷ್ಟೋಸಾರಿ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ಅಂತಹ ಗೆಜೆಟೆಡ್ ಆಫೀಸರುಗಳ ಜನ್ಮ ದಿನಾಂಕಗಳನ್ನು ಸರ್ಕಾರದವರು ಬದಲಾಯಿಸಿರುವ ನಿದರ್ಶನಗಳಾವುವು, ಅವು ಎಷ್ಟು ಎಂಬುದನ್ನಾದರೂ ತಿಳಿಸುತ್ತೀರಾ ?

ಶ್ರೀ ಟಿ. ಮರಿಯಪ್ಪ.—ಸರ್ಕಾರದವರು ಜನ್ಮ ದಿನಾಂಕವನ್ನು ಸುಮ್ಮನೆ ಬದಲಾಯಿಸುವುದಿಲ್ಲ. ಅವರು ಕೊಟ್ಟಿರತಕ್ಕ ಹುಟ್ಟಿದ ತಾರೀಖು ತಪ್ಪಾಗಿದ್ದರೆ, ಯಾವ ತಾರೀಖು ನಿಜಾಂಶವಾಗಿದೆ ಎಂಬುದನ್ನು ಚೆನ್ನಾಗಿ ತಾಳೆನೋಡಿ,ಅದು ಸಮಂಜಸವಾಗಿದೆ ಎಂದು ಕಂಡಾಗ ಮಾತ್ರ ಅವರ ಜನ್ಮದಿನಾಂಕವನ್ನು ಬದಲಾಯಿಸುತ್ತಾರೆ.

ಶ್ರೀ ಜಿ. ದುಗ್ಗಪ್ಪ.—ಕೆಲವು ಆಫೀಸರುಗಳು ಸರಿಯಾದ ಹುಟ್ಟಿದ ತಾರೀಖನ್ನು ಕೊಡುವುದಕ್ಕೆ ಮುಂಚಿತವಾಗಿಯೇ ಸರ್ವಿಸ್ ರಿಜಿಸ್ಟರಿನಲ್ಲಿ ಮೊದಲು ಎಂಟರ್ ಆಗಲು ಎಂದು ಯಾವುದೋ ಒಂದು ತಾರೀಖನ್ನು ಕೊಟ್ಟರೆ ಅದನ್ನು ತಾವು ಅಕ್ಸೆಪ್ಟ್ ಮಾಡಿಕೊಂಡಿಲ್ಲವೇ ?

ಶ್ರೀ ಟಿ. ಮರಿಯಪ್ಪ.—ಕೆಲವರು ಸ್ಕೂಲುಗಳಿಗೆ ಸೇರುವಾಗ ಅಕಸ್ಮಾತ್ತಾಗಿ ಎರಡು-ಮೂರು ವರ್ಷ ಕಡಮೆ ಕೊಟ್ಟಿರುತ್ತಾರೆ. ನಿಷ್ಕೃಷ್ಟವಾಗಿ ಕೊಡುವುದಿಲ್ಲ. ಆದ್ದರಿಂದ ಕೆಲವು ಅಂತಹವರ ಕೇಸುಗಳು ಇರಬಹುದು.

ಶ್ರೀ ಜಿ. ದುಗ್ಗಪ್ಪ—ಹಾಗಾದರೆ ಹುಟ್ಟಿದ ತಾರೀಖು ಕಾಲೇಜುಗಳಲ್ಲಿ ಒಂದು, ಹಾರಸ್ಕೋಪ್‌ನಲ್ಲಿ ಒಂದು, ಸರ್ವಿಸ್ ರಿಜಿಸ್ಟರ್‌ನಲ್ಲಿ ಒಂದು, ಸರ್ಟಿಫಿಕೇಟ್ ಗಳಲ್ಲಿಯೇ ಒಂದು—ಈ ರೀತಿ ನಾನಾ ವಿಧಗಳಾಗಿ ಇರುತ್ತವೆಯೇ ?

ಶ್ರೀ ಟಿ. ಮರಿಯಪ್ಪ.—ಹಾಗೆ ಇರುವುದಿಲ್ಲ. ಪ್ರೈಮರಿ ಸ್ಕೂಲ್, ಮಿಡಲ್‌ಸ್ಕೂಲ್ ಮತ್ತು ಕಾಲೇಜುಗಳಲ್ಲಿ ಸೇರುವಾಗ ಒಂದೇ ಒಂದು ಜನ್ಮದಿನಾಂಕ ವಿರುತ್ತದೆ. ಸರ್ವಿಸ್‌ನಲ್ಲಿ ಸೇರುವಾಗ ಒಂದೆರಡು ವರ್ಷಗಳನ್ನು ಕೆಲವರು ಕಡಿಮೆ ಕೊಟ್ಟಿರುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ರೀತಿ ಎಷ್ಟು ಜನರು ಕೊಟ್ಟಿರುತ್ತಾರೆ ?

ಶ್ರೀ ಟಿ. ಮರಿಯಪ್ಪ.—ಅದಕ್ಕೆ ನೋಟೀಸ್ ಕೊಟ್ಟರೆ ಹೇಳುತ್ತೇನೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸರ್ವಿಸ್ಸಿಗೆ ಸೇರುವಾಗ ವಯಸ್ಸನ್ನು ನಿರ್ಧಾರ ಮಾಡಬೇಕೆಂದು ಒಂದು ಕ್ರಮವನ್ನು ತೆಗೆದುಕೊಂಡಿದ್ದೀರಿ, ಅದು ನಿಜವೇ ?

ಶ್ರೀ ಟಿ. ಮರಿಯಪ್ಪ.—ಹೌದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರ್ವಿಸ್ಸಿಗೆ ಸೇರಿದಾಗ ಇದ್ದ ವಯಸ್ಸಿನ ನಿರ್ಧಾರದಂತೆಯೇ ಅಧಿಕಾರಿಗಳನ್ನು ಹಿಂದೆ ನಿವೃತ್ತಿ ಮಾಡುತ್ತಿದ್ದುದು ನಿಜವೇ?

ಶ್ರೀ ಟಿ. ಮರಿಯಪ್ಪ.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈಗಲೂ ಅದೇ ಮಾರ್ಗವನ್ನು ಅನುಸರಿಸುತ್ತಿದ್ದೀರಾ ?

ಶ್ರೀ ಟಿ. ಮರಿಯಪ್ಪ.—ಹೌದು, ಆ ಮಾರ್ಗವನ್ನೇ ಅನುಸರಿಸಿಕೊಂಡು ಬರುತ್ತಿದ್ದೇವೆ.

ಶ್ರೀ ಅನ್ನಾರಾವ್ ಗಾನಮುಖಿ.—ಈಗ ವಯಸ್ಸುಗಳ ಬದಲಾವಣೆಯಿಂದ, 55 ವರ್ಷಗಳ ವಯಸ್ಸಾದ ಮೇಲೂ ಅಧಿಕಾರಿಗಳನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಮರಿಯಪ್ಪ.—ಇಲ್ಲ, ನನ್ನ ಗಮನಕ್ಕೆ ಬಂದಿಲ್ಲ.

Sri V. P. DEENADAYALU NAIDU.—Is Government aware that if timely action is not taken in such cases, this would affect the salaries and pensions of the concerned persons ?

Mr. SPEAKER.—That is outside the scope of the question. We are concerned only with the alterations of the date of birth. The member wants to know as to what would be the result if certain steps are not taken by Government ; that is a different matter altogether.

Sri M. RAJASEKHARA MURTHY (T.-Narasipur).—May I know whether any amendment has been effected to the Mysore Services Regulation to empower the Government to reopen the question ?

Sri T. MARIAPPA.—I am afraid, there is no such need for such an amendment. Government had enough power to go into this question.

Sri ANNA RAO GANAMUKHI.—May I know when the common service rules are going to be formulated ?

Mr. SPEAKER.—That is a different question.

ಶ್ರೀ ಕೆ. ಪುಟ್ಟಸ್ವಾಮಿ.—ಜಾತಕಗಳನ್ನು ಮತ್ತು ಯೋಗ್ಯತಾ ಪತ್ರಗಳನ್ನು ಕೊಟ್ಟರೆ, ಸರ್ಕಾರದವರು ನೌಕರರ ವಯಸ್ಸನ್ನು ನಿರ್ಧಾರ ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಟಿ. ಮರಿಯಪ್ಪ.—ಆ ವಿಷಯ ಸರ್ಕಾರದ ಗಮನದಲ್ಲಿ ಮೊದಲಿನಿಂದಲೂ ಇದೆ.

ಶ್ರೀ ಎಲ್. ಎಸ್. ವೆಂಕಾಜಿರಾವ್ (ಬನವನ ಗುಡಿ).—ನೌಕರಿಗಳಿಗೆ ನೌಕರರನ್ನು ನೇಮಿಸುವಾಗ ರಿಜಿಸ್ಟ್ರಾರ್ ಆಫ್ ಬರ್ತ್ಸ್ ಅವರಿಂದ ಒಂದು ಬರ್ತ್ ಸರ್ಟಿಫಿಕೇಟನ್ನು ತರಬೇಕೆಂಬ ಒಂದು ನಿಯಮವನ್ನು ಮಾಡುವುದಕ್ಕಾಗುವುದಿಲ್ಲವೇ?

ಶ್ರೀ ಟಿ. ಮರಿಯಪ್ಪ.—ಬರ್ತ್ ಸರ್ಟಿಫಿಕೇಟ್ ಕೊಟ್ಟರೆ ತಾಪತ್ರಯವಿಲ್ಲ. ಆದರೆ ಅದು ಹಳ್ಳಿಗಳಿಂದ ಬರುವವರಿಗೆ ಸಾಧ್ಯವಿಲ್ಲ.

Sri C. K. RAJAIAH SETTY (Chicknaikanahalli).—Is it a fact that 6 persons who had given false age have been exempted last year?

Sri T. MARIAPPA.—I do not think so; I want notice for that.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಚಂದ್ರಶೇಖರ ಪುರ).—ಈ ಐದು ವರ್ಷಗಳಲ್ಲಿ ಗೆಜೆಟೆಡ್ ನೌಕರರ ಹುಟ್ಟಿದ ತಾರೀಖನ್ನು ಗೊತ್ತು ಮಾಡುವ ನಂದರ್ಭದಲ್ಲಿ ಇನ್ನೂ ಕಟ್ಟಕಡೆಯದಾಗಿ ತೀರ್ಮಾನವಾಗದಿರುವ ಕೇಸುಗಳು ಸರ್ಕಾರದ ಮುಂದೆ ಇದೆಯೇ?

Sri T. MARIAPPA.—I want notice.

Promotion of Amildars to the Rank of Assistant Commissioners.

Q.—49. Sri S. KARIYAPPA.—(Virupakshipura).—

Will the Government be pleased to state:—

(*a*) the number of Amildars who had been promoted to the rank of Assistant Commissioners last time;

(*b*) when they propose to raise the Amildars, who have been now drawing their maximum pay, to the rank of Assistant Commissioners?

A.—Sri T. MARIAPPA (Minister for Finance) [on behalf of SRI S. NIJALINGAPPA, (Chief Minister)].—

(*a*) Since 1st Novemer 1956, six Amildars.

(*b*) On occurrence of vacancies and subject to suitability and eligibility of officers for promotion.

ಶ್ರೀ ಎಸ್. ಕರಿಯಪ್ಪ.—ಅಮಲ್ದಾರರ ಪಾತ್ರತೆಯನ್ನು ತೋರಿಸುವ ಪಟ್ಟಿಯನ್ನು ತಯಾರುಮಾಡಿದ್ದಾರೆಯೇ?

ಶ್ರೀ ಟಿ. ಮರಿಯಪ್ಪ.—ಇನ್ನೂ ಆಗಿಲ್ಲ.

ಶ್ರೀ ಎಸ್. ಕರಿಯಪ್ಪ.—ಯಾವಾಗ ತಯಾರು ಆಗುವುದು?

ಶ್ರೀ ಟಿ. ಮರಿಯಪ್ಪ.—ನೋಟಿಸ್ ಬೇಕು.

Sri G. DUGGAPPA.—May I know whether Government would take into consideration the seniority of officers while giving promotions?

Mr. SPEAKER.—That is outside the scope of the question.

ಶ್ರೀ ಎಚ್. ಜಿ. ನರಸಿಂಹೇಗೌಡ.—ಸ್ವಾಮಿ, ಈ ಪಟ್ಟಿಯನ್ನು ತಯಾರು ಮಾಡುವಾಗ ಸಿನಿಯಾರಿಟಿ ಮತ್ತು ಮೆರಿಟ್ ಗಮನದಲ್ಲಿ ತೆಗೆದುಕೊಳ್ಳಲಾಗುವದೋ?

Sri T. MARIAPPA.—Both seniority and merit.

ಶ್ರೀ ಕೆ. ರಾಜಯ್ಯ ಶೆಟ್ಟಿ.—ಮಂತ್ರಿಮಂಡಲವು ಬದಲಾದ ಕೂಡಲೇ ಈ ಪಟ್ಟಿಯಲ್ಲಿ ಹೆಸರುಗಳು ಮೇಲೆ ಇದ್ದುದು ಕೆಳಗೆ, ಕೆಳಗೆ ಇದ್ದುದು ಮೇಲೆ ಹೀಗೆ ಬದಲಾವಣೆಯಾಗಿವೆ ಎಂಬುದು ನಿಜವೇ?

Mr. SPEAKER.—Order, order. When Hon'ble Members ask questions, they must be sure of certain specific cases.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಹಾಗೆ ಆದುದು ನನ್ನ ಗಮನಕ್ಕೆ ಬಂದಿದೆ, ಸ್ವಾಮಿ.

Mr. SPEAKER.—Then you can ask.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಗೋಪಾಲಶೆಟ್ಟಿ ಎಂಬವರ ವಿಷಯದಲ್ಲಿ ಈ ರೀತಿಯಾಗಿ ಬದಲಾವಣೆ ಮಾಡಲಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

Mr. SPEAKER.—The Hon'ble Member should not mention names.

Sri C. K. RAJAIAH SETTY.—May I know the policy in changing names?

Sri T. MARIAPPA.—I have not admitted that names have been changed.

Sri G. SIVAPPA.—May I know the names of the Amildars so promoted?

Mr. SPEAKER.—Is it so important?

Sri G. SIVAPPA.—Yes.

Sri T. MARIAPPA.—I want notice

Dr. R. NAGAN GOWDA.—While giving promotions to these Amildars did Government apply only the rules of the old Mysore State or did they apply the rules of Bombay, Madras and Hyderabad also?

Sri T. MARIAPPA.—The respective rules were applied to the respective officers.

Sri N. RACHIAH.—May I know whether a Scheduled Caste Amildar was included in the Assistant Commissioner's cadre and subsequently he was reverted?

Sri T. MARIAPPA.—I want notice.